# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 860
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 13-12-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯು ರಾಜ್ಯದ ರಾಜಧಾನಿಯಿಂದ ಸರಿ ಸುಮಾರು 700 ಕಿ.ಮೀ. ದೂರದಲ್ಲಿದ್ದು ಇಲ್ಲಿಗೆ ಹವಾನಿಯಂತ್ರಿತ ಸ್ಲೀಪರ್ ಕೋಚ್ ಸೌಲಭ್ಯ ಇಲ್ಲದೆ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಬೆಂಗಳೂರು-ಹೈದರಾಬಾದ್-ಬೀದರ್ ಮಾರ್ಗದಲ್ಲಿ ಐರಾವತ ಕ್ಲಬ್ ಕ್ಲಾಸ್ ಸಾರಿಗೆ ಸೌಲಭ್ಯ ಕಲ್ಪಿಸಲಾಗಿತ್ತು. ಸದರಿ ಸಾರಿಗೆಗೆ ನೀರ ಪ್ರಯಾಣಿಕರ ಕೊರತೆಯಿಂದಾಗಿ ಸಾರಿಗೆಯು ನಷ್ಟದಲ್ಲಿ ಕಾರ್ಯಾಚರಣೆ ಆಗುತ್ತಿದ್ದುದರಿಂದ ಪ್ರಯಾಣಿಕರ ಬೇಡಿಕೆಯನುಸಾರ ಮುಂಗಡ ಆಸನ ಕಾಯ್ದಿರಿಸುವ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ವಾರಾಂತ್ಯ ಹಾಗೂ ಹಬ್ಬ/ಹರಿದಿನಗಳಲ್ಲಿ ಮಾತ್ರ ಸಾರಿಗೆಯನ್ನು ಕಾರ್ಯಾಚರಿಸಲಾಗುತ್ತಿದೆ.<br><br>ಪ್ರಸ್ತುತ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬೀದರ್ ವಿಭಾಗದ ಬೀದರ್ ಘಟಕ-1ರಿಂದ ನಾನ್-ಎಸಿ ಸ್ಲೀಪರ್ ಮತ್ತು ಭಾಲ್ಕಿ ಘಟಕದಿಂದ ಹೊಸದಾಗಿ ಪ್ರಾರಂಭಿಸಲಾದ ನಾನ್-ಎಸಿ ಸ್ಲೀಪರ್ (ಅಮೋಘ ವರ್ಷ) ಸೇರಿ ಎರಡು ನಾನ್-ಎಸಿ ಸ್ಲೀಪರ್ ಸಾರಿಗೆಗಳು ಹಾಗೂ ಬೀದರ್ ಘಟಕ-1ರಿಂದ ಒಂದು ರಾಜಹಂಸ ಸಾರಿಗೆ ಬೆಂಗಳೂರಿಗೆ ಕಾರ್ಯಾಚರಣೆಯಲ್ಲಿರುತ್ತವೆ. |
| ಆ. | ಬಂದಿದ್ದಲ್ಲಿ, ಬೆಂಗಳೂರು-ಬೀದರ್ ಅಂಬಾರಿ ಎ.ಸಿ.ಸ್ಲೀಪರ್ ಬಸ್ ಪ್ರಾರಂಭಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಯೋಚನೆ ಸರ್ಕಾರಕ್ಕಿದೆಯೇ; | ಸಾರ್ವಜನಿಕ ಪ್ರಯಾಣಿಕರು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದು, ಇದು ಅವರ ಬೇಡಿಕೆಗೆ ಅನುಗುಣವಾಗಿರುತ್ತದೆ. |
| ಇ. | ಹಾಗಿದ್ದಲ್ಲಿ, ಪ್ರಾರಂಭ ಮಾಡುವುದು ಯಾವಾಗ; ಇಲ್ಲವಾದಲ್ಲಿ ಕಾರಣವೇನು? | ಪ್ರಸ್ತುತ ಕ.ಕ.ರ.ಸಾ.ನಿಗಮದಲ್ಲಿ ಅಂಬಾರಿ ಎ.ಸಿ ಸ್ಲೀಪರ್ ಬಸ್ ಲಭ್ಯವಿಲ್ಲದಿರುವುದರಿಂದ ಬೀದರ್-ಬೆಂಗಳೂರು ಮಾರ್ಗದಲ್ಲಿ ಅಂಬಾರಿ ಎ.ಸಿ. ಸ್ಲೀಪರ್ ಸಾರಿಗೆ ಪ್ರಾರಂಭಿಸುವ ಯೋಜನೆ ಸದ್ಯಕ್ಕೆ ಇರುವುದಿಲ್ಲ. |

ಸಂಖ್ಯೆ: ಟಿಡಿ 221 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು